ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-7 Special Issue-3, March - April 2026, Pp. 62-65**
**©*IIMRD*, Mysuru**

IIMRD JOURNALS

**www.iimrd.com**

# ಬಾಂಬೆ ಕರ್ನಾಟಕದ ಕನ್ನಡ ಭಾಷೆ ಮತ್ತು ಶಿಕ್ಷಣ ಬದಲಾವಣೆಯಲ್ಲಿ ಡೆಪ್ಯೂಟಿ ಚೆನ್ನಬಸಪ್ಪ

**ಶಶಿಕಲಾ**

ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದೊಮ್ಮಲೂರು, ಬೆಂಗಳೂರು

**ಸಾರಾಂಶ: (Abstract)**

*ಕನ್ನಡ ನುಡಿಗಾಗಿ ಮತ್ತು ನಾಡಿಗಾಗಿ ದುಡಿದವರಲ್ಲಿ ಡೆಪ್ಯುಟಿ ಚೆನ್ನಬಸಪ್ಪನವರು ಪ್ರಾತಃಸ್ಮರಣೆಯಲ್ಲಿ ಒಬ್ಬರಾಗಿದ್ದಾರೆ. ಟಿಪ್ಪುವಿನ ನಿಧನದ ನಂತರ ಕನ್ನಡ ಭಾಷೆ ಮಾತನಾಡುವ ಪ್ರದೇಶಗಳು ನಾಲ್ಕು ಭಾಗಗಳಾಗಿ ಹರಿದು ಹಂಚಿ ಹೋದವು. ಆ ಸಂದರ್ಭದಲ್ಲಿ ಧಾರವಾಡ, ಬಿಜಾಪುರ ಮತ್ತು ಬೆಳಗಾವಿ ಪ್ರಾಂತ್ಯಗಳು ಬಾಂಬೆ ಪ್ರಾಂತ್ಯಕ್ಕೆ ಸೇರಿದ್ದು, ಇವುಗಳನ್ನು ಬಾಂಬೆ ಕರ್ನಾಟಕ ಪ್ರಾಂತ್ಯಗಳೆಂದೇ ಕರೆಯಲಾಗಿತ್ತು. ಈ ಭಾಗದಲ್ಲಿ ಕನ್ನಡ ಭಾಷೆ ಮರಾಠಿ ಬಾಷೆಯ ಪ್ರಾಬಲ್ಯದಲ್ಲಿ ಕಣ್ಮರೆಯಾಗಿತ್ತು. ಇಂತಹ ಕಠಿಣ ಸಂದರ್ಭದಲ್ಲಿ ಡೆಪ್ಯೂಟಿ ಚೆನ್ನಬಸಪ್ಪನವರು ಈ ಪ್ರದೇಶಗಳಲ್ಲಿ ಕನ್ನಡ ಭಾಷೆಯ ಅವಶ್ಯಕತೆಯನ್ನು ಮನಗೊಂಡು ಸರ್ಕಾರದ ಜೊತೆ ಸಂಪರ್ಕಿಸಿ ಕನ್ನಡ ಶಾಲೆಗಳನ್ನು ಪ್ರಾರಂಭಿಸುವುದರ ಮೂಲಕ ಕನ್ನಡವನ್ನು ಉಳಿಸಿ ಬೆಳೆಸಿ ಮತ್ತು ಬಳಸುವಲ್ಲಿ ಪ್ರೇರಕ ಶಕ್ತಿಯಾಗಿ ಕಂಡುಬಂದವರು ಶ್ರೀಯುತ ಡೆಪ್ಯೂಟಿ ಚನ್ನಬಸಪ್ಪನವರು.*

**ಮುಖ್ಯಪದಗಳು (Keywords):** *ಕರ್ನಾಟಕ ಇತಿಹಾಸ, ಬಾಂಬೆ ಪ್ರಾಂತ್ಯ, ಡೆಪ್ಯೂಟಿ ಚನ್ನಬಸಪ್ಪ.*

## ಪೀಠಿಕೆ

ಮರಾಠಿಯ ಪ್ರಾಬಲ್ಯವೇ ಕಾರಣವಾಗಿ ಕನ್ನಡ ಮತ್ತು ಕನ್ನಡತನಗಳು ಉತ್ತರ ಕರ್ನಾಟಕದಲ್ಲಿ ನುಚ್ಚು ಗುಜ್ಜಾಗಿದ್ದಾಗ ಕನ್ನಡ ಮತ್ತು ಕನ್ನಡಿಗರ ಏಳಿಗೆಗಾಗಿ ಶ್ರಮಿಸಿದ ವ್ಯಕ್ತಿ ಡೆಪ್ಯೂಟಿ ಚನ್ನಬಸಪ್ಪ. ಹಲವು ವರ್ಷಗಳ ಕಾಲ ಬೊಂಬಾಯಿ ಅಧಿಪತ್ಯದ ಶಿಕ್ಷಣ ಇಲಾಖೆಯಲ್ಲಿ ಡೆಪ್ಯೂಟಿ ಶಿಕ್ಷಣಾಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದರಿಂದ ಇವರಿಗೆ ಡೆಪ್ಯೂಟಿ ಚನ್ನಬಸಪ್ಪನವರೆಂಬ ಅಭಿದಾನ.

ಇವರು 1833 ನವೆಂಬರ್ 1 ರಂದು ಬೆಳಗಾವಿ ಜಿಲ್ಲೆಯ ಗೋಕಾಕ್‌ನ ಬಸಲಿಂಗಪ್ಪ ಮತ್ತು ತಿಪ್ಪವ್ವ ಎಂಬ ಶರಣ ಸಂಪ್ರದಾಯ ಕುಟುಂಬದಲ್ಲಿ ಜನಿಸಿದರು. ಇವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ತಮ್ಮ ಸ್ವಗ್ರಾಮದಲ್ಲಿ ಮುಗಿಸಿದರು. ಇವರ ತಂದೆ ಅಕಾಲ ಮರಣಕ್ಕೆ ತುತ್ತಾಗಿ ಇವರ ತಾಯಿ ಇವರನ್ನು ಅತಿ ಕಷ್ಟದಿಂದ ಸಾಕಿ ಸಲಹಿದರು. ಡೆಪ್ಯೂಟಿ ಚೆನ್ನಬಸಪ್ಪನವರ ಶಿಕ್ಷಣ ಧಾರವಾಡ ಮತ್ತು ಪುಣೆಯಲ್ಲಿ ನಡೆಯಿತು. ಇಲ್ಲಿ ಶಿಕ್ಷಣ ಸುಧಾರಕ ಜ್ಯೋತಿಬಾಪುಲೆಯವರ ಪರಿಚಯವಾಗಿ ಅವರಂತೆ ಮುಂದೆ ಶಿಕ್ಷಣ ಪ್ರಚುರಪಡಿಸಿದ

*Please cite this article as:* ಶಶಿಕಲಾ. (2026). ಬಾಂಬೆ ಕರ್ನಾಟಕದ ಕನ್ನಡ ಭಾಷೆ ಮತ್ತು ಶಿಕ್ಷಣ ಬದಲಾವಣೆಯಲ್ಲಿ ಡೆಪ್ಯೂಟಿ ಚೆನ್ನಬಸಪ್ಪ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರಿಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(3). ಪು.ಸಂ.* 62–65

ಕೆಲಸವನ್ನು ಮಾಡಿದರು. ಕಡು ಬಡತನದ ಕಪ್ಪು ಛಾಯೆಯಲ್ಲಿ ಎಲ್ಲಿಯೇ ಜರುಗಿದ ಅವರ ವಿದ್ಯಾಭ್ಯಾಸ ಅವರ ಮೇಧಾವಿತನಕ್ಕೆ ಮತ್ತು ಬುದ್ಧಿಪ್ರಮತ್ತತೆಗೆ ಯಾವುದೇ ಕುಂದು ತರಲಿಲ್ಲ.

ಅವರು ಇಂಜಿನಿಯರಿಂಗ್ ಶಿಕ್ಷಣವನ್ನು ಹೊಂದಿದ್ದರು ಆ ಕಾಲದಲ್ಲಿ ಇಂಜಿನಿಯರ್ ಹುದ್ದೆಗಳಿಲ್ಲದೆ ಇದ್ದುದರಿಂದ ಅವರು ಅಧ್ಯಾಪಕ ವೃತ್ತಿಯನ್ನು ಅವಲಂಬಿಸಬೇಕಾಯಿತು. 1858 ರಲ್ಲಿ ಅಧ್ಯಾಪಕರಾಗಿ ವೃತ್ತಿಯನ್ನು ಆರಂಭಿಸಿದ ಅವರು ಮುಂದೆ ಧಾರವಾಡ ನಾರ್ಮಲ್ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ ಅನಂತರ ಡೆಪ್ಯುಟಿ ಶಿಕ್ಷಣ ಅಧಿಕಾರಿಯಾಗಿ ಅವರು ಸಲ್ಲಿಸಿದ ಸೇವೆ ಅನುಪಮಾ ಶಿಕ್ಷಣಾಧಿಕಾರಿಯಾಗಿ ಶಿಕ್ಷಣದ ಮಹತ್ವವನ್ನು ಅರಿತಿದ್ದ ಡೆಪ್ಯೂಟಿ ಚೆನ್ನಬಸಪ್ಪನವರು ಬಹುಬೇಗ ಕನ್ನಡಿಗರ ಉನ್ನತಿ, ಕನ್ನಡ ಭಾಷೆ ಮತ್ತು ಶಿಕ್ಷಣದಿಂದ ಮಾತ್ರವೇ ಸಾಧ್ಯ ಎಂಬುದನ್ನು ಅರಿತರು.

**ಡೆಪ್ಯೂಟಿ ಚೆನ್ನಬಸಪ್ಪನವರ ವೃತ್ತಿ ಜೀವನ**

1856ರಲ್ಲಿ ಧಾರವಾಡದಲ್ಲಿ ನಾರ್ಮಲ್ ಸ್ಕೂಲ್ ಪ್ರಾರಂಭಗೊಂಡಿತು. ಈ ಸಂಸ್ಥೆಗೆ ಪ್ರಾಚಾರ್ಯರಾಗಿ ಚನ್ನಬಸಪ್ಪನವರನ್ನು ನೇಮಿಸಲಾಯಿತು. ನಂತರ 1861ರಲ್ಲಿ ಈ ನಾರ್ಮಲ್ ಸ್ಕೂಲ್ ಧಾರವಾಡದಿಂದ–ಬೆಳಗಾವಿಗೆ ವರ್ಗಾಯಿಸಲಾಯಿತು. ಇಲ್ಲಿಗೆ ವರ್ಗಾಯಿಸಿದ ಮೇಲೆ ಈ ಸ್ಕೂಲ್–ಕಾಲೇಜು ಆಗಿ ಮಾರ್ಪಡಾಯಿತು. ಚೆನ್ನಬಸಪ್ಪನವರು ಪ್ರಾಂಶುಪಾಲರಾಗಿ ನಂತರ ಶಿಕ್ಷಣ ಇಲಾಖೆಯ ನಿರ್ದೇಶಕರಾಗಿ ಆಯ್ಕೆಯಾದರು. ಈ ಸಂದರ್ಭದಲ್ಲಿ ತಾವೇ ಸ್ವತಃ ಕನ್ನಡ ಪುಸ್ತಕಗಳನ್ನು ಬರೆದು ಇತರರನ್ನು ಪ್ರೋತ್ಸಾಹಿಸಿ ಕನ್ನಡ ಶಾಲೆಗಳಿಗೆ ಪಠ್ಯವ್ಯವಸ್ಥೆ ಮಾಡಿದರು. ನಂತರ ಧಾರವಾಡದ ಶಿಕ್ಷಕ ತರಬೇತಿ ಶಾಲೆಯ ಪ್ರಾಂಶುಪಾಲರಾದರು. ಇಲ್ಲಿ 'ಜೀವನಶಿಕ್ಷಣ' ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ನಂತರ ಮಠ ಪತ್ರಿಕೆಯನ್ನು ಪ್ರಾರಂಭಿಸಿದರು. ಇದು ಮಾಸ ಪತ್ರಿಕೆಯಾಗಿದ್ದು, ಕಲಿಕೆಯ ವಿಧಾನ, ಕಲಿಕೆಯ ಉನ್ನತೀಕರಣ, ಶಾಲಾ ನಿಯಮಗಳು, ಶಿಕ್ಷಣದ ಆಜ್ಞೆಗಳನ್ನು ಈ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತಿತ್ತು.

**ಚನ್ನಬಸಪ್ಪನವರ ಮಾತೃಭಾಷೆಯ ಒಲವು**

ಕನ್ನಡಿಗರಿಗೆ ಅವರ ಮಾತೃಭಾಷೆಯಲ್ಲಿಯೇ ಶಿಕ್ಷಣ ದೊರೆಯುವಂತಾಗಲು ಕನ್ನಡ ಶಾಲೆಗಳ ಮತ್ತು ಕನ್ನಡ ಅಧ್ಯಾಪಕರ ತರಬೇತಿ ಶಾಲೆಗಳನ್ನು ಸ್ಥಾಪಿಸಿದರು. ಕನ್ನಡಿಗರಿಗೆ ಅವರ ಭಾಷೆ ಮತ್ತು ಸಂಸ್ಕೃತಿಗಳ ಮೇಲೆ ಅಭಿಮಾನ ಮೂಡುವಂತೆ ಮಾಡಿದರು. ರೆವರೆಂಡ್ ಫಾದರ್ ಕಿಟ್ಟಲ್ ಅವರಿಗೆ ಕನ್ನಡ ಕನ್ನಡ ನಿಘಂಟು ರಚನೆಯಲ್ಲಿ ಪ್ರೋತ್ಸಾಹ ನೀಡಿದರು. ಕನ್ನಡದ ಬಡ ಮಕ್ಕಳಿಗೆ ಶಿಕ್ಷಣ ನೀಡಲು ಉಚಿತ ಪ್ರಸಾದ ನಿಲಯಗಳನ್ನು ಸ್ಥಾಪಿಸಿದರು. ಅವು ಆರ್ಥಿಕ ಮುಗ್ಗಟ್ಟಿಗೆ ಒಳಗಾದಾಗ ತಮ್ಮ ಹೆಂಡತಿಯ ಮೈ ಮೇಲಿನ ಆಭರಣ ಮತ್ತು ಮನೆಗಳನ್ನು ಮಾರಿ ಸಾಲ ತೀರಿಸಿದಂತಹ ತ್ಯಾಗಮಯಿ ಡೆಪ್ಯುಟಿ ಚೆನ್ನಬಸಪ್ಪನವರು.

ಷೇಕ್ಸ್‌ಪಿಯರ್‌ನ ಮ್ಯಾಕ್‌ಬಥ್ ಮತ್ತು ಕಾಮಿಡಿ ಆಫ್ ಎರರ್ಸ್ ಕೃತಿಗಳನ್ನು ಇಂಗ್ಲೀಷ್‌ನಿಂದ ಕನ್ನಡಕ್ಕೆ ಅನುವಾದಿಸಿದರು. ಗಣಿತ ಪುಸ್ತಕಗಳನ್ನು ಕನ್ನಡದಲ್ಲೇ ಬರೆದರು. ಸರ್ಕಾರದೊಂದಿಗೆ ಪತ್ರ ವ್ಯವಹಾರ ನಡೆಸಿ ಕನ್ನಡದಲ್ಲಿ ದಾಖಲೆಗಳನ್ನು ನಿರ್ವಹಣೆ ಮಾಡಲು ಒತ್ತಾಯಿಸಿದರು. ಮರಾಠಿ ಭಾಷೆಯ ಬಳಕೆಯಿಂದ ತತ್ತರಿಸಿ ಹೋದ ಕನ್ನಡ ಭಾಷೆಯನ್ನು ಮೇಲೆತ್ತುವ ಕನ್ನಡ ಶಾಲೆಗಳನ್ನು ತೆರೆಯುವುದು, ಕನ್ನಡ ಭಾಷೆಯಲ್ಲಿ

ಪಠ್ಯ ರಚನೆ ಮಾಡುವುದು, ಕನ್ನಡೇತರರಿಗೆ ಕನ್ನಡ ಭಾಷೆಯನ್ನು ತಿಳಿಸುವ ಕೆಲಸವನ್ನು ಶ್ರೀಯುತರರು ಮಾಡಿದರು.

ಕನ್ನಡ ಭಾಷಾ ಶಿಕ್ಷಕರ ತರಬೇತಿಗೆ ಅಭ್ಯರ್ಥಿಗಳು ದೊರೆಯುವುದು ಕಾಲಕ್ರಮೇಣ ಕಡಿಮೆಯಾಯಿತು. ಇದರಿಂದ ಚೆನ್ನಬಸಪ್ಪನವರು ತರಬೇತಿ ಕಾಲೇಜನ್ನು ಬೆಳಗಾವಿಯಿಂದ ಧಾರವಾಡಕ್ಕೆ ಸ್ಥಳಾಂತರಿಸಲು ಸರ್ಕಾರಕ್ಕೆ ಪತ್ರ ಬರೆದು ಸತತ ಪ್ರಯತ್ನ ಮಾಡಿದರು. ಪರಿಣಾಮವಾಗಿ 1875ರಲ್ಲಿ ಈ ತರಬೇತಿ ಸಂಸ್ಥೆ ಬೆಳಗಾವಿಯಿಂದ ಧಾರವಾಡಕ್ಕೆ ಸ್ಥಳಾಂತರಗೊಂಡಿತು. ಹೀಗೆ ಡೆಪ್ಯೂಟಿ ಚೆನ್ನಬಸಪ್ಪನವರು ಪ್ರಾಂಶುಪಾಲರಾಗಿ, ಶಿಕ್ಷಣ ಅಧಿಕಾರಿಯಾಗಿ, ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯನ್ನುಂಟು ಮಾಡಿದರೆಂದರೆ ತಪ್ಪಾಗಲಾರದು.

**ಚನ್ನಬಸಪ್ಪನವರ ಕನ್ನಡ ಸಾಹಿತ್ಯ ಮತ್ತು ಗ್ರಂಥ ರಚನೆ**

ಚನ್ನಬಸಪ್ಪನವರಿಗೆ ಕನ್ನಡ ಸಾಹಿತ್ಯ ಮತ್ತು ಗ್ರಂಥ ರಚನೆಯ ಬಗ್ಗೆ ಅವರಿಗಿದ್ದ ಕಳಕಳಿ ಅಪಾರ. ಕನ್ನಡ ಸಾಹಿತ್ಯ ಮತ್ತು ಗ್ರಂಥ ರಚನೆಯ ಬಗ್ಗೆ ಅವರಿಗಿದ್ದ ಕಳಕಳಿ ಅಪಾರ. ಇವರ ಬೆಂಬಲ ಪ್ರೋತ್ಸಾಹದಿಂದ ಗಂಗಾಧರ ಮಡಿವಾಳೇಶ್ವರ ತುರಮುರಿಯವರು ಕನ್ನಡ ಕವಿತಾ ಪದ್ಧತಿ ಮತ್ತು ಕರ್ನಾಟಕದ ಶಬ್ದಮಂಜರಿ ರಚನೆಯನ್ನು ಶೇಷಗಿರಿ ರಾವ್ ಚರಮುರಿಯವರು ಕಾಳಿದಾಸನ ಅಭಿಜ್ಞಾನ ಶಾಕುಂತಲದ ಭಾಷಾಂತರ ಕಾರ್ಯವನ್ನು ಮಾಡಿದರು. ಮತ್ತು ಆಡಳಿತ ವ್ಯವಹಾರಗಳಲ್ಲಿ ಕನ್ನಡ ಭಾಷೆ ಬೆಳೆಸುವಂತೆ ಸರ್ಕಾರದ ಮನವೊಲಿಸಿದರು. ಕನ್ನಡಿಗರಲ್ಲಿ ಕನ್ನಡದ ಬಗ್ಗೆ ಅಭಿಮಾನವನ್ನು ಮೂಡಿಸಿದರು ಕನ್ನಡಕ್ಕಾಗಿ ಸುಮಾರು 15 ವರ್ಷ ಕಾಲ ಅವಿರತವಾಗಿ ಶ್ರಮಿಸಿದರು.

**ಉಪಸಂಹಾರ**

ಉತ್ತರ ಕರ್ನಾಟಕದಲ್ಲಿ ಆಡಳಿತ ಮತ್ತು ಶಿಕ್ಷಣವೆಲ್ಲವೂ ಮರಾಠಿಮಯವಾಗಿದ್ದ ಕಾಲದಲ್ಲಿ ಕನ್ನಡದ ಹಣತೆಯನ್ನು ಹಚ್ಚಿ ಕನ್ನಡಿಗರ ಮನಸುಗಳಲ್ಲಿ ಕನ್ನಡದ ಬೆಳಕನ್ನು ಬೆಳಗಿದ ಮಹಾನ್ ಚೇತನ ಅವರದು. ಸರ್ಕಾರದೊಂದಿಗೆ ವ್ಯವಹರಿಸಿ ಕನ್ನಡ ಶಿಕ್ಷಣದ ಬಗ್ಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ತಾವೇ ಒಂದು ಕನ್ನಡ ಶಾಲೆ ತೆರೆದು ಇತರರಿಗೆ ಮಾರ್ಗದರ್ಶಿಯಾದರು. ಆಂಗ್ಲ ಶಿಕ್ಷಣಾಧಿಕಾರಿಗಳ ಮನವೊಲಿಸಿ ಬೊಂಬಾಯಿ ಪ್ರಾಂತ್ಯದಲ್ಲಿದ್ದ ಕನ್ನಡ ಮಾತನಾಡುವ ಪ್ರದೇಶಗಳಲ್ಲಿ ಮರಾಠಿಯನ್ನು ಹಿಮ್ಮೆಟ್ಟಿಸಿ ಕನ್ನಡದಲ್ಲಿ ಶಿಕ್ಷಣ ದೊರೆಯುವಂತೆ ಮಾಡಿದ್ದು ಚನ್ನಬಸಪ್ಪನವರ ಹಿರಿಮೆ.

ಡೆಪ್ಯುಟಿ ಚೆನ್ನಬಸಪ್ಪನವರು 1881 ರಲ್ಲಿ ಅಕಾಲ ಮಾರಣಕ್ಕಿಡಾದರು. ಆಗ ಅವರಿಗೆ ಆಗಿದ್ದ ವಯಸ್ಸು ಕೇವಲ 47 ವರ್ಷ. ಅವರು ಹತ್ತಿಸಿದ ಕನ್ನಡದ ದೀಪ ನಂದಾದೀಪವಾಗಿ ಪ್ರಜ್ವಲಿಸಿ ಕನ್ನಡಿಗರ ಮನವನ್ನು ಬೆಳಗಿದ್ದು ಅಲ್ಲದೆ ಅವರಲ್ಲಿ ಕನ್ನಡದ ಬಗ್ಗೆ ಕರ್ನಾಟಕದ ಸಂಸ್ಕೃತಿ ಮತ್ತು ಇತಿಹಾಸಗಳ ಅಭಿಮಾನವನ್ನು ಮೂಡಿಸಿತು. ಇದಲ್ಲದೆ ಕನ್ನಡ ನಾಡು ಮತ್ತು ಕನ್ನಡಿಗರು ಒಂದುಗೂಡಬೇಕು ಎಂಬ ಅಶೋತ್ತರವನ್ನು ಇವರು ಹೊಂದಿದ್ದರು.

**ಪರಾಮರ್ಶನ ಗ್ರಂಥಗಳು**


- ಆಂದ್ರಾಳ,ಎಂ.ಜಿ. *ಕನ್ನಡ ದೀಪ,* ಡೆಪ್ಯೂಟಿ ಚೆನ್ನಬಸಪ್ಪನವರ ಸ್ಮರಣ ಗ್ರಂಥ, ಡೆಪ್ಯೂಟಿ ಚೆನ್ನಬಸಪ್ಪನವರ ಸ್ಮಾರಕ ಶತಮಾನೋತ್ಸವ ಸಮಿತಿ.
- ಬಾಲಣ್ಣ ಸೀಗಿಹಳ್ಳಿ. (1933). *ಡೆಪ್ಯೂಟಿ ಚೆನ್ನಬಸಪ್ಪನವರ ಜೀವನ ಮತ್ತು ಸಾಧನೆ,* ಬೆಳಗಾಂ.
- ಗೋಪಾಲರಾವ್, ಎಚ್.ಎಸ್. (2020), *ಕರ್ನಾಟಕ ಏಕೀಕರಣ ಇತಿಹಾಸ.* ನವ ಕರ್ನಾಟಕ ಪ್ರಕಾಶನ.
- ರಾಮಚಂದ್ರ ಪಾಟೀಲ. *ಡೆಪ್ಯೂಟಿ ಚೆನ್ನಬಸಪ್ಪ.* ಮಕ್ಕಳ ಸಾಹಿತ್ಯ ನಿರ್ಮಾಪಕರ ಮಾಲಿಕೆ
- ವೆಂಕಟೇಶ ಸಂಗಾಲಿ. *ಡೆಪ್ಯೂಟಿ ಚೆನ್ನಬಸಪ್ಪ.* ರಾಷ್ಟ್ರೋತ್ಥಾನ ಪರಿಷತ್.